ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,
ಉಡುಪಿ ಜಿಲ್ಲೆ , ಉಡುಪಿ.

ಸೆಷನ್ಸ್ ಕೇಸ್ ನಂಃ **28/2024** ಪಿಡಬ್ಲ್ಯು-3

ಸಿಡಬ್ಲ್ಯು-10

| | | |
|---|---|---|
| ಸಾಕ್ಷಿದಾರರ ಹೆಸರು | - | ಮನೋಹರ್ |
| ಗಂಡನ ಹೆಸರು | - | ಶಿವಪ್ಪ ಮಾದರ |
| ವಯಸ್ಸು | - | 29 ವರ್ಷ |
| ಉದ್ಯೋಗ | - | ಪಿ.ಸಿ ನಂಬ್ರ 374, ಹೆಬ್ರಿ ಪೊಲೀಸ ಠಾಣೆ |
| ವಿಳಾಸ | - | ಹೆಬ್ರಿ |

ದಿನಾಂಕಃ 29-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ

2021 ನೇ ಇಸವಿಯಲ್ಲಿ ಕರ್ನಾಟಕ ಪೊಲೀಸ ಇಲಾಖೆಗೆ ಆಯ್ಕೆಗೊಂಡು ಉಡುಪಿ ಜಿಲ್ಲೆಗೆ ಬಂದಿರುತ್ತೇನೆ. ನಂತರ ನಾನು ಹೆಬ್ರಿ ಪೊಲೀಸ್ ಠಾಣೆಯಲ್ಲಿ ಪೊಲೀಸ ಕಾನ್ಸ್ ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಮೃತ ಜ್ಯೋತಿ ಪರಿಚಯ ಇದೆ. ಆಕೆ ಕಾಪು ಪೊಲೀಸ್ ಠಾಣೆಯಲ್ಲಿ ಮಹಿಳಾ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದರು. ನಾನು ಮತ್ತು ಮೃತ ಜ್ಯೋತಿ ಮೂಲತಃ ಬಾಗಲಕೋಟೆ ಜಿಲ್ಲೆಯವರು. ನನಗೆ ಆರೋಪಿಯ ಪರಿಚಯ ಇದೆ. ಅವರು ಮೃತ ಜ್ಯೋತಿರವರ ಗಂಡ. 2023 ನೇ ಇಸವಿಯ ವಿಧಾನಸಭಾ ಚುನಾವಣಾ ಕರ್ತವ್ಯದ ಸಮಯ ನನಗೆ ಜ್ಯೋತಿರವರ ಪರಿಚಯವಾಗಿರುತ್ತದೆ. ನಾನು ಮತ್ತು ಮೃತ ಜ್ಯೋತಿ ಕಾಪುವಿನಲ್ಲಿ ಚುನಾವಣಾ ಕರ್ತವ್ಯದ ವೇಳೆ ಒಂದೇ ಕಡೆ ಕೆಲಸ ಮಾಡಿದ್ದೇವೆ. ಚುನಾವಣಾ ಕರ್ತವ್ಯದಲ್ಲಿ ನಾವು ಒಬ್ಬರಿಗೊಬ್ಬರು ಮಾತನಾಡಿದಾಗ ಒಂದೇ ಜಿಲ್ಲೆಯವರು ಎಂದು ಗೊತ್ತಾಗಿ ಪರಸ್ಪರ ಫೋನ್ ನಂಬರ್ ಗಳನ್ನು ತೆಗೆದುಕೊಂಡಿರುತ್ತೇವೆ. ನಾನು ಮತ್ತು ಜ್ಯೋತಿ ಯವರು

ಬಿ.ಎಡ್ ಪದವಿ ಪಡೆದಿದ್ದು, ನಂತರ ಟಿ.ಇ.ಟಿ ಪರೀಕ್ಷೆ ಬರೆಯುವ ನಿಟ್ಟಿನಲ್ಲಿ ಇಬ್ಬರೂ ಫೋನ್ ನಲ್ಲಿ ಚರ್ಚೆ ಮಾಡಿಕೊಳ್ಳುತ್ತಿದ್ದು, ಈ ಬಗ್ಗೆ ವಾಟ್ಸಪ್ಪ ಚಾಟ್, ವಿಡಿಯೋ ಕಾಲ್ ಮಾಡಿ ಮಾತನಾಡುತ್ತಿದ್ದೇವು. ಅಲ್ಲದೆ ಬಂದೋಬಸ್ತ ಸಮಯದಲ್ಲಿ ನಾವು ಒಬ್ಬರಿಗೊಬ್ಬರು ಭೇಟಿ ಆಗುತ್ತಿದ್ದೇವು. ಮೃತ ಜ್ಯೋತಿ ಒಮ್ಮೊಮ್ಮೆ ನಮ್ಮ ಹೆಬ್ರಿಯ ಪೊಲೀಸ ವಸತಿ ಗೃಹಕ್ಕೆ ಆಕೆಯ ಬ್ಯಾಚ್ ರವರನ್ನು ಮಾತನಾಡಿಸಲು ಬರುತ್ತಿದ್ದು, ಆ ಸಮಯದಲ್ಲೂ ಕೂಡ ನಾನು ಆಕೆಯ ಜೊತೆ ಮಾತನಾಡುತ್ತಿದ್ದೇನು. ಮೃತ ಜ್ಯೋತಿ ಮತ್ತು ಆಕೆಯ ಸ್ನೇಹಿತರು ಆಕೆಯ ಹುಟ್ಟುಹಬ್ಬವನ್ನು ಹೆಬ್ರಿಯಲ್ಲಿ ಆಚರಿಸಿದ್ದು, ಸದ್ರಿ ಕಾರ್ಯಕ್ರಮದಲ್ಲೂ ನಾನು ಭಾಗವಹಿಸಿರುತ್ತೇನೆ.

2. ನಾನು ಮತ್ತು ಜ್ಯೋತಿ ಸಂಪರ್ಕದಲ್ಲಿರುವ ವಿಚಾರ ಆರೋಪಿಗೆ ಗೊತ್ತಾಗಿರುತ್ತದೆ. ವಿಚಾರ ತಿಳಿದ ಗಂಡ ನನಗೆ ದೂರವಾಣಿ ಕರೆ ಮಾಡಿ ನೀನು ನನ್ನ ಹೆಂಡತಿಯೊಂದಿಗೆ ಯಾಕೆ ಮಾತನಾಡುತ್ತೀಯ ಎಂದು ಕೇಳಿದ್ದು, ಅದಕ್ಕೆ ನಾನು ಟಿ.ಇ.ಟಿ ಪರೀಕ್ಷೆಯ ಸಂಬಂಧ ಒಬ್ಬರಿಗೊಬ್ಬರು ಚರ್ಚಿಸಿರುತ್ತೇವೆ ಎಂದು ಹೇಳಿರುತ್ತೇನೆ. ಅದಕ್ಕೆ ಆರೋಪಿಯು ನೀನು ಆಕೆಯೊಂದಿಗೆ ಮಾತನಾಡುವುದು ಬೇಡ ಎಂದು ತಿಳಿಸಿರುತ್ತಾನೆ. ನಂತರ ಈ ವಿಚಾರವನ್ನು ನಾನು ಮೃತ ಜ್ಯೋತಿಗೆ ಕರೆ ಮಾಡಿ ತಿಳಿಸಿರುತ್ತೇನೆ. ನಂತರ ನಾನು ಆಕೆಯೊಂದಿಗೆ ಮಾತನಾಡುವುದನ್ನು ನಿಲ್ಲಿಸಿರುತ್ತೇನೆ. ಸ್ವಲ್ಪ ದಿವಸದ ನಂತರ ಆಕೆಯೇ ನನಗೆ ಕರೆ ಮಾಡಿ ನನ್ನ ಗಂಡ ನಾನು ಯಾರೊಂದಿಗೂ ಮಾತನಾಡಿದರೂ ಕೂಡ ಅನುಮಾನದಿಂದ ನೋಡುತ್ತಾರೆ, ನೀನು ಬೇಜಾರು ಮಾಡಿಕೊಳ್ಳಬೇಡ ನನ್ನೊಂದಿಗೆ ಮಾತನಾಡು ಎಂದು ತಿಳಿಸಿರುತ್ತಾರೆ. ನಂತರ ನಾನು ಪುನಃ ಆಕೆಯೊಂದಿಗೆ ಮಾತನಾಡಿರುತ್ತೇನೆ. ಹಾಗೆ ಮಾತನಾಡುವ ಸಮಯ ಜ್ಯೋತಿ ನನ್ನ ಬಳಿ ಆರೋಪಿ ನನಗೆ ಹಿಂಸೆ ನೀಡುತ್ತಿದ್ದು, ಮನು ಜೊತೆಗೆ ನಿನಗೆ ಸಂಬಂಧ ಇದೆ ಎಂದು ಹೇಳುತ್ತಿದ್ದು, ಕರ್ತವ್ಯದ ನೆಪ ಹೇಳಿ ನಾನು ನಿನ್ನೊಂದಿಗೆ ತಿರುಗಾಡಲು ಬರುತ್ತಿದ್ದೇನೆಂದು ಹೀಯಾಳಿಸಿದಲ್ಲದೆ, ನನ್ನ ನಿನ್ನ ನಡುವೆ ಸಂಬಂಧ ಇದೆ ಎಂದು ಬೇರೆಯವರ ಬಳಿ ಹೇಳಿಕೊಂಡು

ಬರುತ್ತಿದ್ದಾನೆ ಎಂದು ತಿಳಿಸಿರುತ್ತಾಳೆ. ಅಲ್ಲದೆ ಆಕೆ ನನ್ನ ಬಳಿ ಆರೋಪಿ ಈ ರೀತಿ ಅಪವಾದ ಮಾಡುವುದರಿಂದ ನನಗೆ ಜೀವನವೆ ಬೇಡ ಎಂದು ಹೇಳುತ್ತಿದ್ದಳು.

3. ಪುನಃ ನಂತರ ಆರೋಪಿ ನನಗೆ ಮತ್ತೆ ಕರೆಮಾಡಿ ಈ ವಿಚಾರದಲ್ಲಿ ಬೈದಿದ್ದು ಮತ್ತು ಆತನ ಸ್ನೇಹಿತರ ಹಾಗೂ ಸಂಬಂಧಿಕರ ಮುಖಾಂತರ ಕರೆ ಮಾಡಿ ಎಚ್ಚರಿಕೆ ಕೊಡುತ್ತಿದ್ದ ಕಾರಣ ನಾನು ಆಕೆಯ ಮತ್ತು ಆರೋಪಿಯ ಮೊಬೈಲ್ ನಂಬರ್ ನ್ನು ಬ್ಲಾಕ್ ಮಾಡಿರುತ್ತೇನೆ. ದಿನಾಂಕ 30.03.2024 ರಂದು ಆರೋಪಿತನ ದುಷ್ಪ್ರೇರಣೆಯಿಂದ ಮನನೊಂದು ಆಕೆ ಕಾಪುವಿನಲ್ಲಿ ವಾಸ ಮಾಡುತ್ತಿದ್ದ ವಸತಿ ಗೃಹದಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ಆರ್.ಎ. ರವರಿಂದ</u>

ನನಗೆ ಜ್ಯೋತಿ ಪರಿಚಯ ಆಗಿ ಆಕೆಯೊಂದಿಗೆ ನಾನು ಮಾತನಾಡುವ ಸಮಯದಲ್ಲಿ ಆರೋಪಿ ಇಳಕಲ್ ನಲ್ಲಿ ವಾಸ ಇದ್ದರು. ಇಲ್ಲಿ ಜ್ಯೋತಿ ಒಬ್ಬರೆ ವಾಸ ಇದ್ದರು ಎಂದರೆ ಸರಿ. ನಾವು ಪ್ರತಿದಿನ ಕರೆಮಾಡಿ ಮಾತನಾಡುತ್ತಿದ್ದೆವು. ನಾವು ಬಂದೋಬಸ್ತ ಸಮಯದಲ್ಲಿ ಪರಸ್ಪರ ಭೇಟಿಯಾಗುತ್ತಿದ್ದೇವು. ನಾವು ಶೃಂಗೇರಿ ದೇವಸ್ಥಾನ, ಕುಂಜಾರು ದೇವಸ್ಥಾನಕ್ಕೆ ಜೊತೆಯಲ್ಲಿ ಹೋಗಿದ್ದೇವು. ಆರೋಪಿ ನನಗೆ ಮೊದಲ ಬಾರಿ ಕರೆ ಮಾಡಿದಾಗ ಆತ ತನ್ನ ಊರಿನಲ್ಲಿ ವಾಸ ಇದ್ದರು. ಜ್ಯೋತಿರವರ ಅಣ್ಣ ಬಸವರಾಜ್ ನನಗೆ ಕರೆ ಮಾಡಿದ್ದರು. ಅವರು ನನಗೆ ಜ್ಯೋತಿ ಜೊತೆ ನೀನು ಮಾತನಾಡಬೇಡ ಎಂದು ಹೇಳಿದ್ದರು. ಮನು ಜೊತೆಗೆ ನಿನಗೆ ಸಂಬಂಧ ಇದೆ ಎಂದು ಹೇಳುತ್ತಿದ್ದು, ಕರ್ತವ್ಯದ ನೆಪ ಹೇಳಿ ನಾನು ನಿನ್ನೊಂದಿಗೆ ತಿರುಗಾಡಲು ಬರುತ್ತಿದ್ದೇನೆಂದು ಹೀಯಾಳಿಸಿದಲ್ಲದೆ, ನನ್ನ ನಿನ್ನ ನಡುವೆ ಸಂಬಂಧ ಇದೆ ಎಂದು ಬೇರೆಯವರ ಬಳಿ ಹೇಳಿಕೊಂಡು ಬರುತ್ತಿದ್ದಾನೆ ಎಂದು ಮತ್ತು ಅಲ್ಲದೆ ಆಕೆ ನನ್ನ ಬಳಿ ಆರೋಪಿ ಈ ರೀತಿ ಅಪವಾದ ಮಾಡುವುದರಿಂದ ನನಗೆ ಜೀವನವೆ ಬೇಡ ಎಂದು ನನಗೆ ಆಕೆ ಕರೆ ಮಾಡಿದ್ದು ಹೇಳುತ್ತಿದ್ದಳು

ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಕೆಯ ಅಣ್ಣ ನನಗೆ ಕರೆ ಮಾಡಿ ಹೇಳಿದ ನಂತರದಲ್ಲಿ ನಾನು ಆಕೆಯ ಮೊಬೈಲ್ ನಂಬರ್ ನ್ನು ಬ್ಲಾಕ್ ಮಾಡಿಲ್ಲ.

2. ನನಗೆ ಮೊದಲು ಆಕೆಯ ಗಂಡ ಕರೆ ಮಾಡಿ ಹೇಳಿದ ನಂತರದಲ್ಲಿ ನಾನು ಆಕೆಯ ಸಂಸಾರದಲ್ಲಿ ತೊಂದರೆ ಆಗಬಾರದು ಎಂದು ಆಕೆಯ ಜೊತೆ ಮಾತನಾಡುವುದನ್ನು ನಿಲ್ಲಿಸಿರುತ್ತೇನೆ. ಒಬ್ಬ ಗಂಡ ಆತನ ಹೆಂಡತಿಗೆ ಬೇರೆ ವ್ಯಕ್ತಿಯು ಕರೆ ಮಾಡುವುದು ಮತ್ತು ವಿಡಿಯೋ ಕಾಲ್ ಮಾಡುವುದನ್ನು ನೋಡಿದರೆ ಆಕ್ಷೇಪ ಮಾಡುತ್ತಾರೆ ಎಂದರೆ ಸರಿ. ಆಗಸ್ಟ್ 2023 ರಿಂದ ನಾನು ಆಕೆಯ ಜೊತೆ ಮಾತನಾಡುವುದನ್ನು ನಿಲ್ಲಿಸಿದ್ದ ನಂತರ ಆಕೆಯ ಜೀವನದಲ್ಲಿ ಏನು ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಈ ಕಾರಣದಿಂದ ಆಕೆ ಯಾವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ದಿನಾಂಕ 30.03.2024 ರಂದು ಆರೋಪಿತನ ದುಷ್ಪ್ರೇರಣೆಯಿಂದ ಮನನೊಂದು ಆಕೆ ಕಾಪುವಿನಲ್ಲಿ ವಾಸ ಮಾಡುತ್ತಿದ್ದ ವಸತಿ ಗೃಹದಲ್ಲಿ ನೇಣು ಬಿಗಿದು ಆತ್ಮಹತ್ಯೆಮಾಡಿಕೊಂಡಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ನೀಡಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

2 ನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.